<u>ಸಿವಿಲ್_ನ್ಯಾಯಾಧೀಶರು_ಮತ್ತು_ಹೆಚ್ಚುವರಿ_ಜೆ.ಎಂ.ಎಫ್.ಸಿ_ನ್ಯಾಯಾಲಯ,_ತರೀಕೆರೆ</u>

ಸಿ.ಸಿ.ಸಂಖ್ಯೆ.1113/2022

ಉಪಸ್ಥಿತರುಃ

ಶ್ರೀ ಸಂತೋಷ ಕುಮಾರ ಪಿ. ಎಸ್., ಎಂ.ಕಾಂ., ಎಲ್.ಎಲ್.ಎಂ.

ಪಿರ್ಯಾದುದಾರರುಃ ಅಜ್ಜಂಪುರ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದಃ
ಶ್ರೀಮತಿ ಸುನಿತಾ,
ಬಿನ್ ಶ್ರೀ ಬಸವರಾಜಪ್ಪ,
ವಯಸು 45 ವರ್ಷಗಳು,
ವಾಸಃ ಬೀರಲಿಂಗೇಶ್ವರ ಬಡಾವಣ,
ಅಜ್ಜಂಪುರ.

:: ದೋಷಾರೋಪಣೆ ::

ಸಂತೋಷ ಕುಮಾರ್ ಪಿ. ಎಸ್., ಎಂ.ಕಾಂ., ಎಲ್.ಎಲ್.ಎಂ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ತರೀಕೆರೆ ಆದ ನಾನು, ಈ ಮೂಲಕ ಆರೋಪಿಯಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ-

ದಿನಾಂಕ 09.05.2021 ರಂದು ಬೆಳಿಗ್ಗೆ 8.00 ರ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಅಜ್ಜಂಪುರ ಪಟ್ಟಣದ ಬೀರಲಿಂಗೇಶ್ವರ ಬಡಾವಣೆಯ ಕೆರೆ ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಗುಡಿಸಲಿನ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ 90 ಎಂ.ಎಲ್.ನ 40 ರಾಜಾ ವಿಸ್ಕಿ ಪೌಚಗಳನ್ನು ಮಾರಾಟಕ್ಕಾಗಿ ಇಟ್ಟುಕೊಂಡಿರುತ್ತೀರಿ. ಆದುದರಿಂದ ಆರೋಪಿಯಾದ ನೀವು ನನ್ನ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದೆ 32 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮವಾಗಿ ಮದ್ಯವನ್ನು ಹೊಂದಿದ್ದು, ಸದರಿ ಹೊಂದುವಿಕೆ ಅಕ್ರಮ ಎಂದು ಗೊತ್ತಿದ್ದರೂ ಸಹ ನಿಮ್ಮ ಬಳಿ ಹೊಂದಿರುತ್ತೀರಿ. ಆದುದರಿಂದ ಆರೋಪಿಯಾದ ನೀವು ನನ್ನ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದೆ 34 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತ ಕ್ರಮವಾಗಿ ಸರ್ಕಾರ ಕೆಲವು ಮುಂಜಾಗ್ರ ಕ್ರಮಗಳನ್ನು ಕೈಗೊಳ್ಳುವಂತೆ ಹಲವು ಆದೇಶಗಳನ್ನು ಹೊರಡಿಸಿದ್ದರು ಸಹ ಆರೋಪಿಯಾದ ನೀವು ಪ್ರಾಣಕ್ಕೆ ಅಪಾಯಕಾರಿಯಾದ ರೋಗದ ಸೋಂಕು ಹರಡುವ ಸಂಭವವಿರುವಾಗ ಅಕ್ರಮವಾಗಿ ಮದ್ಯ ಮಾರಾಟ ಮಾಡಿ ನಿರ್ಲಕ್ಷ್ಯವಹಿಸಿ, ಭಾರತೀಯ ದಂಡ ಸಂಹಿತೆ ಕಲಂ 269 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಪ್ರಾಣಕ್ಕೆ ಅಪಾಯಕಾರಿಯಾದ ರೋಗದ ಸೋಂಕು ಹರಡುವ ಸಂಭವವಿರುವಾಗ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಸರ್ಕಾರದಿಂದ ಜಾರಿಯಲ್ಲಿದ್ದ ರೋಗ ನಿರೋದಕ ನಿರ್ಬಂಧ ನಿಯಮವನ್ನು ಉಲ್ಲಂಘಿಸಿ, ಭಾರತೀಯ ದಂಡ ಸಂಹಿತೆ ಕಲಂ 271 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕ:30.06.2023 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ವೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಸಹಿ/-
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಜೆಎಂಎಫ್ ಸಿ , ತರೀಕೆರೆ

Accused No.1 to 3 present. Accused counsel present.

Sec.207 of Cr.P.c. is complied. Charge framed and read over to accused persons in the language known to them and they plead not guilt and claim to be tried.

Issue witness summons to CW.1 and 6 to 8. Call on: **16.06.2022.**

**Civil Judge & Addl. J.M.F.C.**
**Tarikere**